ಸಲ ರೈತರಿಗೆ ಅವಕಾಶ ಮಾಡಿಕೊಡುವ ಅವಶ್ಯಕತೆ ಬಹಳ ಇದೆ. ತಿಳುವಳಿಕೆ ಇದ್ದೋ, ಇಲ್ಲದೆಯೋ, ರೈತರು ಅಕ್ರಮವಾಗಿ ಹಾಕಿಕೊಂಡು ಬಿಟ್ಟಿದ್ದಾರೆ. ಈ ರಾಜ್ಯದಲ್ಲಿ ಮತ್ತೆ ಒಂದು ಸಾರಿ ರೈತರಿಗೆ ಅವಕಾಶ ಕೊಟ್ಟು ಅದನ್ನು ಸಕ್ರಮ ಮಾಡಿದರೆ ಇನ್ನು ಮುಂದೆ ಇಂತಾದ್ದಕ್ಕೆ ಅವಕಾಶವೇ ಇಲ್ಲವೆಂದು once for all ಹೇಳಿ ultimate time ಕೊಟ್ಟುಬಿಡಿ. ದಯಮಾಡಿ ಇನ್ನೊಂದು ಸಾರಿ ಅಕ್ರಮವನ್ನು ಸಕ್ರಮ ಮಾಡುವಂಥಹ ಯೋಜನೆಯನ್ನು ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ರಾಜ್ಯದ ರೈತರ ಹಿತದೃಷ್ಟಿಯಿಂದ ಅದನ್ನು ಖಂಡಿತ ಪರಿಶೀಲನೆ ಮಾಡಿ ಅನುಕೂಲ ಮಾಡುತ್ತೇವೆ.

23 (49) ಶ್ರೀ ಡೆರಿಕ್ ಎಂ.ಬಿ. ಪುಲ್‌ಇನ್‌ಫಾ (ನಾಮಾಂಕಿತ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯ ಸರ್ಕಾರವು ರಾಜ್ಯದ ಆಂಗ್ಲೋ–ಇಂಡಿಯನ್ ಸಮುದಾಯಕ್ಕೆ ಶುಲ್ಕ ಮರುಪಾವತಿ ಮಾಡುತ್ತಿರುವುದು ನಿಜವೇ?

(ಆ) ಹಾಗಿದ್ದಲ್ಲಿ ಯಾವಾಗಿನಿಂದ ಜಾರಿಗೆ ತರಲಾಗಿದೆ

(ಇ) ಶುಲ್ಕವನ್ನು ಎಷ್ಟು ಮರುಪಾವತಿ ಮಾಡಲಾಗುತ್ತಿದೆ. ಅರ್ಧ ಅಥವಾ ಸಂಪೂರ್ಣ

(ಈ) ಈ ಸ್ಕೀಮಿನಲ್ಲಿ ಸರ್ಕಾರವು ಎಷ್ಟು ಮೊತ್ತ ಭರಿಸುತ್ತದೆ. (ವರ್ಷವಾರು ವಿವರ ನೀಡುವುದು)

(ಉ) ಈ ಸ್ಕೀಮಿನಲ್ಲಿ ಎಷ್ಟು ಆಂಗ್ಲೋ–ಇಂಡಿಯನ್ ವಿದ್ಯಾರ್ಥಿಗಳು ಫಲಾನುಭವಿಗಳಾಗಿರುತ್ತಾರೆ. (ವರ್ಷವಾರು ವಿವರ ನೀಡುವುದು)

(ಊ) ಒಬ್ಬ ವಿದ್ಯಾರ್ಥಿಯ ಮೇಲೆ ವರ್ಷಕ್ಕೆ ಎಷ್ಟು ಮೊತ್ತ ಖರ್ಚು ಮಾಡಲಾಗುತ್ತದೆ. (ಶುಲ್ಕ ಮರುಪಾವತಿ ವಿವರ ನೀಡುವುದು)

(ಋ) ಎಷ್ಟು ಶಾಲೆಗಳು ಈ ಶುಲ್ಕ ಮರುಪಾವತಿ ಸ್ಕೀಂಗೆ 1990 ಮತ್ತು 2008ರಲ್ಲಿ ಬೆಂಗಳೂರು ನಗರದಲ್ಲಿ ಒಳಗೊಂಡಿರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

(ಅ) ಹೌದು

(ಆ) 1987–88 ರಿಂದ ಜಾರಿಗೆ ತರಲಾಗಿದೆ.

(ಇ) ಈ ಶುಲ್ಕ ದರಗಳು ಶಾಲೆಯಿಂದ ಶಾಲೆಗೆ ವ್ಯತ್ಯಾಸವಿರುವುದರಿಂದ ಮರುಪಾವತಿ ಹಣವನ್ನು ಪ್ರತಿ ಆಂಗ್ಲೋ-ಭಾರತೀಯ ವಿದ್ಯಾರ್ಥಿಗೆ ವರ್ಷಕ್ಕೆ ರೂ. 3000/-00 ಗಳಿಗೆ ಮೀರದಂತೆ ಮಿತಿಗೊಳಿಸಿ ಮರುಪಾವತಿಸಲಾಗುತ್ತಿದೆ.

(ಈ) 1) 1999-2000 – ರೂ. 25.00 ಲಕ್ಷ
2) 2000-2001 – ರೂ. 25.00 ಲಕ್ಷ
3) 2001-2002 – ರೂ 25.00 ಲಕ್ಷ
4) 2002-2003 – ರೂ. 20.00 ಲಕ್ಷ
5) 2003-2004 – ರೂ. 20.00 ಲಕ್ಷ
6) 2004-2005 – ರೂ. 20.00 ಲಕ್ಷ
7) 2005-2006 – ರೂ. 08.30 ಲಕ್ಷ
8) 2006-2007 – ರೂ. 07.10 ಲಕ್ಷ
9) 2007-2008 – ರೂ. 08.30 ಲಕ್ಷ
10) 2008- 2009 – ರೂ. 06.97 ಲಕ್ಷ

2005-06 ನೇ ಸಾಲಿನಿಂದ ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳಿಗೆ ಆಯವ್ಯಯವನ್ನು ಬಿಡುಗಡೆ ಮಾಡಲಾಗುತ್ತಿದೆ.

(ಉ) 1) 1999-2000 – 585
2) 2000-2001 – 563
3) 2001-2002 – 582
4) 2002-2003 – 514
5) 2003-2004 – 272
6) 2004-2005 – 260
7) 2005-2006 – 139
8) 2006-2007 – 135
9) 2007-2008 – 173
10) 2008-2009- ಪ್ರಗತಿಯಲ್ಲಿದೆ.

(ಊ) ರೂ. 3000-00 ಗಳ ಮಿತಿಗೆ ಒಳಪಟ್ಟಂತೆ ಪ್ರತಿ ವಿದ್ಯಾರ್ಥಿಗೆ ಬಿಡುಗಡೆ ಮಾಡಲಾಗುವುದು

(ಖ) ಈ ಶುಲ್ಕ ಮರುಪಾವತಿ ಸ್ಕೀಮ್‌ಗೆ ರಾಜ್ಯದ ಒಟ್ಟು ಶಾಲೆಗಳಲ್ಲಿ ಬೆಂಗಳೂರು ನಗರದಲ್ಲಿ ಒಳಪಡುವ ಶಾಲೆಗಳ ಸಂಖ್ಯೆ ಕೆಳಕಂಡಂತಿದೆ.

ಕ್ರ.ಸಂ.	ವರ್ಷ	ಒಟ್ಟು ಶಾಲೆಗಳ ಸಂಖ್ಯೆ	ಬೆಂಗಳೂರು ನಗರದ ಶಾಲೆಗಳ ಸಂಖ್ಯೆ
1	1999–2000	49	28
2	2000–2001	42	29
3	2001–2002	43	21
4	2002–2003	34	19
5	2003–2004	29	12
6	2004–2005	31	13
7	2005–2006	09	09
8	2006–2007	08	08
9	2007–2008	08	08
10	2008–2009	ಪ್ರಗತಿಯಲ್ಲಿದೆ.	ಪ್ರಗತಿಯಲ್ಲಿದೆ.

Sri Derrick M.B. Fullinfaw: Respected Speaker, after seeing the answer, I am extremely unhappy.....

ಶ್ರೀ ನೆ.ಲ. ನರೇಂದ್ರಬಾಬು: ಕನ್ನಡದಲ್ಲಿ ಮಾತನಾಡಿ.

Sri. Derrick M.B. Fullinfaw: I have my right as a Member.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಅವರು ಕನ್ನಡದಲ್ಲಿ ಪ್ರಾರಂಭ ಮಾಡಿದರು.

ಶ್ರೀ ನೆ.ಲ. ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೆ, ಅವರಿಗೆ ಕನ್ನಡ ಚೆನ್ನಾಗಿ ಬರುತ್ತದೆ. ಕನ್ನಡದಲ್ಲಿ ಮಾತನಾಡಲು ಹೇಳಿ.

Sri Derrick M.B. fullinfaw: Allow me to Speack. I have right.

ಅಧ್ಯಕ್ಷರು: ನರೇಂದ್ರಬಾಬುವರವರೇ, ಕುಳಿತುಕೊಳ್ಳಿ, ಸಂಗಮೇಶ್‌ರವರೇ ಕುಳಿತುಕೊಳ್ಳಿ. ನೀವು ಪ್ರಶ್ನೆ ಕೇಳಿ.

Sri Derrick M.B. Fullinfaw: Respected Speaker, after seeing the answer furnished by the Hon'ble Minister to my question, I feel extremely unhappy, anguished and disappointed that my Anglo-Indian Community, which I am representing here, has been neglected for the past 8-10 years. when the fee reimbursement scheme was introduced in the year 1987-88, it was total fee reimbursement, whatever fee the Anglo-Indian students paid in English medium schools was totally reimbursed but in the year 2000 when S.M. Krishna's Congress Government was in power, they reduced this fee reimbursement to a meager 3,000 rupees per student, per year, Sir, today the fee in English medium schools ranges from Rs. 12,000 to Rs. 20,000 and this has caused a lot of inconvenience and hardship for my community, therefore, I am requesting the Hon'ble Minister to Kindly see that this fee reimbursement amount is increased from Rs. 3,000 to Rs.10,000 per student, per year, will the Minister consider my request?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಶ್ರೀಯುತ ಡೆರಿಕ್ ಅವರು ಬಹಳ.....

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರಿಗೆ ಕನ್ನಡ ಅರ್ಥವಾಗುತ್ತದೆ. ಅವರು ಕನ್ನಡದಲ್ಲಿ ಮಾತನಾಡಬೇಕು ಎಂದು ತಾವೆಲ್ಲರೂ ಹೇಳಿದ್ದೀರಿ. ಈಗ ನಾನು ಕನ್ನಡದಲ್ಲಿ ಮಾತನಾಡುತ್ತಿದ್ದರೆ, ಇಂಗ್ಲೀಷಿನಲ್ಲಿ ಮಾತನಾಡಿ ಎಂದು ಹೇಳುತ್ತಿದ್ದೀರಿ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಸಚಿವರು ಭರವಸೆ ಕೊಡಬೇಕು. ಮುಂದಿನ ಸಲ ಅವರು ಪ್ರಶ್ನೆಯನ್ನು ಕೇಳುವಾಗ ಕನ್ನಡವನ್ನು ಕಲಿತುಕೊಂಡು ಕನ್ನಡದಲ್ಲಿ ಮಾತನಾಡಲಿ ಎಂದು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾವು, ನೀವು ಹೇಳುವುದು ಎಲ್ಲರಿಗೂ ಅರ್ಥವಾಗುತ್ತದೆ. ನಾನು ಶ್ರೀಯುತ ಡೆರಿಕ್‌ರವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆ. ರಾಜ್ಯದಲ್ಲಿ ಆಂಗ್ಲೋ ಇಂಡಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ 1987–88ರಿಂದ ಜಾರಿಗೆ ತರಲಾದಂಥ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಯಲ್ಲಿ ನಾವು ಹಣವನ್ನು ಬಹಳ ಕಡಿಮೆ ಮಾಡಿದ್ದೇವೆ. ಈ ಹಣವನ್ನು 2003–04, 2004–05ರ ನಂತರದಲ್ಲಿ ಪ್ರತಿಯೊಬ್ಬ

ವಿದ್ಯಾರ್ಥಿಗೆ 3,000 ರೂಪಾಯಿ ಎಂದು ಹಿಂದಿನ ಸರ್ಕಾರ ನಿಶ್ಚಯ ಮಾಡಿದೆ. ಇದನ್ನು ಮಾಡುವುದಕ್ಕೆ ಮುಖ್ಯವಾದ ಕಾರಣ ಎಂದರೆ, ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ fee Structure ನಲ್ಲಿ ಬಹಳಷ್ಟು ವ್ಯತ್ಯಾಸ ಇದೆ. ಒಂದು ಶಾಲೆಯಲ್ಲಿ ಅದು 6,000–7,000 ರೂಪಾಯಿಗಳಿದ್ದರೆ, ಇನ್ನೊಂದು ಶಾಲೆಯಲ್ಲಿ 10,000–12,000 ರೂಪಾಯಿಗಳಿದ್ದರೆ, ಮತ್ತೊಂದು ಶಾಲೆಯಲ್ಲಿ 20,000–25,000 ರೂಪಾಯಿಗಳಿದೆ. ಏಕೆಂದರೆ, C.B.S.E. ಮತ್ತು I.C.S.E. ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ನಾವು ಇದನ್ನು ಅನ್ವಯಿಸಿಕೊಂಡಿದ್ದೆವು. ಹಾಗಾಗಿ, C.B.S.E. ಮತ್ತು I.C.S.E. ಶಾಲೆಗಳಿಗೆ fee structure ನಿಗದಿ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ನಮಗೆ ಅಧಿಕಾರವಿಲ್ಲ. ಆ ಬಗ್ಗೆ Central Board ನವರು ಅವರಿಗೆ ನಿರ್ದೇಶನ ಕೊಡಬೇಕಾಗುತ್ತದೆ. ಆ ಹಿನ್ನಲೆಯಲ್ಲಿ ನಾವು fee reimbursement ಮಾಡುತ್ತಿರುವುದನ್ನು, ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ವ್ಯತ್ಯಾಸ ಇರುವುದನ್ನು ಮನಗಂಡು ಹಿಂದಿನ ಸರ್ಕಾರ ಎಲ್ಲ ವಿದ್ಯಾರ್ಥಿಗಳಿಗೂ 3,000 ರೂಪಾಯಿ ಎಂದು ಮಾಡಿದೆ. 3,000 ರೂಪಾಯಿ ಕಡಿಮೆಯಾಗುತ್ತದೆ ಎನ್ನುವುದು ನಮ್ಮ ಅಂಕಿಸಂಖ್ಯೆಗಳ ಮೂಲಕ ಗೊತ್ತಾಗುತ್ತದೆ. 2005–06ರಿಂದ ಈ ಹಣವನ್ನು ಜಿಲ್ಲಾ ಪಂಚಾಯಿತಿಯ ಮೂಲಕ ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಹಣವನ್ನೂ ಹೆಚ್ಚು ಮಾಡುವುದಕ್ಕೆ ಬೇಕಾದಂಥ ಒಂದು ಅಗತ್ಯ ಪರಿಶೀಲನೆಯನ್ನು ನಾವು ಮಾಡುತ್ತೇವೆ ಮತ್ತು ನಿಮ್ಮ ಭಾವನೆಗಳಿಗೆ ನಾವು ಸಕಾರಾತ್ಮಕವಾಗಿ ಸ್ಪಂದಿಸುತ್ತೇವೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂಥ ಇಂಥ ಅವಕಾಶವನ್ನು ನಾವು ಮಾಡಿಕೊಡುವುದಕ್ಕೆ ಮುಂದೆ ಬರುವಂಥ ದಿನಗಳಲ್ಲಿ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಟಿ. ರವಿ: Anglo Indian Community ಯಲ್ಲಿ ಎಲ್ಲಾ Tax ಕಟ್ಟುವವರೇ ಇರುವುದು. Anglo Indianನಲ್ಲಿ B.P.L. Card ಇರುವವರು ಯಾರಾದರೂ ಇದ್ದಾರೆಯೇ?

Sri Derrick M.B. Fullinfaw: Sir, what I want to say is, the amount fixed in the year 2008-09 is very very meager. I am requesting you to increase that amount. Secondly, the number of Anglo- Indian students in the year 1999-2000 was 585 students who were getting this fee reimbursement and in the year 2006-07 it was only 135 students. There

are so many students who are studying indifferent schools and I request the Education Minister to see that all Anglo- Indian students get the benefit. you can issue a Circuler to all the English medium Schools telling them that if there are any Anglo-Indian students, they should report to the department. today our community is suffering, we are educationally backward community, we are economically backward community and therefore I request the Minister to Kindly take note of it, Another thing I want to bring to the notice of the Hon'ble Speaker, is that in the answer sheet given to me, my name is very badly spelt by the concerned officer. I think he should take care to see that it is corrected.

ಅಧ್ಯಕ್ಷರು: Correction ಮಾಡಿಸೋಣ.

Sir Derrick M.B. Fullinfaw: Thank you, Sir,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಹೇಳಿರುವಂತೆ 1999–2000ದ ಸಾಲಿನಲ್ಲಿ 585 ವಿದ್ಯಾರ್ಥಿಗಳು ಓದಿದ್ದು, 3,000 ರೂಪಾಯಿಗಳ fee reimbursement ಸೌಲಭ್ಯವನ್ನು ತೆಗೆದುಕೊಂಡಿದ್ದರೆ, 2007–08 ರಲ್ಲಿ 173 ಜನ ವಿದ್ಯಾರ್ಥಿಗಳು 3,000 ರೂಪಾಯಿಗಳ fee reimbursement ಅನ್ನು ತೆಗೆದುಕೊಂಡಿದ್ದಾರೆ. ಈ ಯೋಜನೆಯ ಬಗ್ಗೆ ನಾವು ನಮ್ಮ ಇಲಾಖೆಯ ವತಿಯಿಂದ ಇನ್ನಷ್ಟು ಹೆಚ್ಚು ಪ್ರಚಾರಪಡಿಸಿ, ಎಲ್ಲಾ ವಿದ್ಯಾರ್ಥಿಗಳಿಗೂ ಈ ಹಣ ತಲುಪುವುದಕ್ಕೆ ಬೇಕಾದಂಥ ಕ್ರಮವನ್ನು ನಾವು ಜಿಲ್ಲಾ ಪಂಚಾಯತಿಯ ಮೂಲಕ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ನಾವು ಪ್ರತಿ institution level ನಲ್ಲಿ awareness ಮೂಡಿಸಬೇಕಾಗಿದೆ. ಅದನ್ನು ನಾವು ನಮ್ಮ D.D.P.I.ಗಳ ಮೂಲಕ ಮತ್ತು ನಮ್ಮ ಜಿಲ್ಲಾ ಪಂಚಾಯಿತಿ ವ್ಯವಸ್ಥೆಗಳ ಮೂಲಕ, ಪ್ರತಿ institution ನಲ್ಲಿ Anglo Indian ಸಮೂದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಈ ರೀತಿ 3,000 ರೂಪಾಯಿ fee reimbursement ಮಾಡುವಂಥ ಒಂದು ಯೋಜನೆ ಇದೆ ಎನ್ನುವಂಥಾದ್ದು ಹೆಚ್ಚು ಪ್ರಚಾರಕ್ಕೆ ಒಳಪಡಿಸಿ, ಹೆಚ್ಚು ವಿದ್ಯಾರ್ಥಿಗಳಿಗೆ ಈ ಯೋಜನೆಯ ಲಾಭಸಿಗುವುದಕ್ಕೆ ಸರ್ಕಾರದಿಂದ ಪ್ರಯತ್ನವನ್ನು ಮಾಡುತ್ತೇವೆ.

Sri Derrick M.B. Fullinfaw: I request the Hon'ble Minister to see that this scheme is continued. Because there are many Anglo- Indian students in many schools who are denied this privilege from the Goverrnment.

ಅಧ್ಯಕ್ಷರು: ಡೆರಿಕ್‌ರವರೇ, ಮುಂದಿನ ಸಲ ನೀವು ಪ್ರಶ್ನೆ ಕೇಳುವಾಗ, ಕನ್ನಡದಲ್ಲೇ ಕೇಳುವ ರೀತಿಯಲ್ಲಿ ತಯಾರಾಗಿ ಬನ್ನಿ.

Sri Derrick M.B.Fullinfaw: It is not possible sir. In that case,. I will have to simply sit.

ಅಧ್ಯಕ್ಷರು: ಯಾವುದೂ not posible ಅಲ್ಲ. ಪ್ರಯತ್ನ ಮಾಡಿ.

ಶ್ರೀ ನೆ. ಲ. ನರೇಂದ್ರಬಾಬು: ಅವರು ಕನ್ನಡ ತಾಯಿಗೆ, ಕನ್ನಡ ರಾಜ್ಯಕ್ಕೆ, ಕನ್ನಡ ಭಾಷೆಗೆ ಗೌರವ ಕೊಡಬೇಕು. ಈ ರಾಜ್ಯದಲ್ಲಿದ್ದು ಕನ್ನಡ ಕಲಿಯದಿದ್ದರೆ ಹೇಗೆ?

ಶ್ರೀ ಎಂ. ಶ್ರೀನಿವಾಸ್: ಅವರು ಕನ್ನಡ ಕಲಿತುಕೊಳ್ಳಲಿ ಪರವಾಗಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು: ನಿಜವಾಗಿ ನೋಡಿದರೆ, ನಿಮ್ಮ ಉತ್ತಮವಾದ ಸಲಹೆಯನ್ನು ಅವರು ಸ್ವಾಗತಿಸಬೇಕು.

Sri Derrick M.B. Fullinfaw: I have my right.

ಶ್ರೀ ನೆ.ಲ. ನರೇಂದ್ರಬಾಬು: ನಿಮ್ಮ right ಇರಬಹುದು, ಕನ್ನಡದಲ್ಲಿ ಮಾತನಾಡಿ ಎಂದು ಹೇಳುವುದು ನಮ್ಮ right ಸಹಾ ಆಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನನಗೆ ಕನ್ನಡ ಬರುವುದಿಲ್ಲ. ನಾನು ಕನ್ನಡ ಮಾತನಾಡುವುದಿಲ್ಲ ಎಂದರೆ ಅರ್ಥವೇನು? I have my right ಎಂದರೇನು? Right ಇದೆ ಎಂದರೆ ಏನು ಬೇಕಾದರೂ ಮಾತನಾಡಬಹುದು ಎಂದು ಅಲ್ಲ ಸ್ವಾಮಿ.

Sri Derrick M.B. Fullinfaw: Respected Speaker, I have the highest respect for the Kannada language.

ಶ್ರೀ ನೆ.ಲ. ನರೇಂದ್ರ ಬಾಬು: ಅವರ ಕನ್ನಡ ವಿರೋಧಿ ನೀತಿಯನ್ನು ನಾನು ಖಂಡಿಸುತ್ತೇನೆ.

Sri Derrick M.B. Fullinfaw: I have difficulty in learning the language. I am trying.

ಶ್ರೀ ನೆ.ಲ. ನರೇಂದ್ರ ಬಾಬು: ಅವರು ಕನ್ನಡ ಕಲಿತುಕೊಳ್ಳಲು ತಯಾರಾಗಿದ್ದರೆ ನಾನೇ ಅವರಿಗೆ ಕನ್ನಡ ಪಾಠ ಹೇಳಿಕೊಡುತ್ತೇನೆ. ಗೋಪಾಲಕೃಷ್ಣ ಮತ್ತು ನಾನು ಇಬ್ಬರೂ ಹೇಳಿಕೊಡುತ್ತೇವೆ.

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು: ಕನ್ನಡ ಭಾಷೆಯ ಬಗ್ಗೆ ಗೌರವ ಇದೆ ಎಂದು ಹೇಳುತ್ತಾರೆ. ಅದರ ಮೇಲೆ ಚರ್ಚೆ ಏಕೆ ಬೇಕು?

ಅಧ್ಯಕ್ಷರು: ನಾನು ಅದರ ಬಗ್ಗೆ ಅವರಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಈಗ ಚರ್ಚೆ ಬೇಡ. ತಾವು ಉತ್ತರ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಉದ್ದೇಶಪೂರ್ವಕವಾಗಿ ಕನ್ನಡ ಮಾತನಾಡಲು ಬರುವುದಿಲ್ಲ ಎಂದು ಹೇಳುತ್ತಾರೆ. ಅವರಿಗೆ ಕನ್ನಡ ಮಾತನಾಡಲು ಬರುತ್ತದೆ. ಬೇಕೆಂದೇ ಅವರು ಮಾತನಾಡುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ನನ್ನ ಜೊತೆಯಲ್ಲಿ ಬಹಳ ವರ್ಷಗಳಿಂದ ಒಡನಾಟದವರು. ನಾವೆಲ್ಲಾ ಪರಿಚಿತರು, ಸ್ನೇಹಿತರು, ಅವರು ನಿಶ್ಚಿತವಾಗಿ ಕನ್ನಡದಲ್ಲಿ ಮಾತನಾಡುತ್ತಾರೆ. ಅವರು ನನ್ನ ಜೊತೆಯಲ್ಲಿ ಕನ್ನಡದಲ್ಲೇ ಮಾತನಾಡುವುದು. ಅವರು ಅಧಿವೇಶನದಲ್ಲಿ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ತಾವು ಅದನ್ನು ಅನ್ಯಥಾ ಭಾವಿಸಬಾರದು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಹಾಗಾದರೆ ನೀವೇನಾದರೂ ಅವರಿಗೆ ಇಂಗ್ಲೀಷಿನಲ್ಲಿ ಮಾತನಾಡಲು ಹೇಳಿರುವಿರಾ? ಕನ್ನಡ ಬರುತ್ತದೆ ಎನ್ನುತ್ತಾರೆ. ಕನ್ನಡದಲ್ಲಿ ಮಾತನಾಡುವುದಿಲ್ಲ ಎಂದರೆ ಅರ್ಥವೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮ್ಮ ಇಲಾಖೆಯ ಅಧಿಕಾರಿಗಳಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗದೇ ಇರುವಂತೆ ಎಚ್ಚರಿಕೆ ವಹಿಸಿ, ಯಾವುದೇ ರೀತಿಯ drop out ಆಗದೇ ಅವರು ಶಿಕ್ಷಣವನ್ನು ಮುಂದುವರೆಸುವುದಕ್ಕೆ ಬೇಕಾದಂಥ ಕ್ರಮವನ್ನು ನಮ್ಮ ಇಲಾಖೆಯಿಂದ ನಾವು ತೆಗೆದುಕೊಳ್ಳುತ್ತೇವೆ.

ವಿದ್ಯುತ್ ಸರಬರಾಜು

24 (47) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ಮಾನ್ಯ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ; ಫೇಸ್ ಹಾಗೂ ಗಂಟೆಗಳ ವಿವರ ನೀಡುವುದು;